

ಗಂಡಸರು ಮತ್ತು ಹೆಂಗಸರಲ್ಲಿ ವ್ಯತ್ಯಾಸವೇನು?
ಗಂಡಸರು ಮಾತನಾಡಿ ಮುಗಿಸಲು ನಾಲ್ಕಾರು ನಿಮಿಷ ಸಾಕು. ಹೆಂಗಸರು ಮಾತನಾಡಿ ಮುಗಿಸಲು ಗಂಟೆಗಳೇ ಬೇಕು.

ಶಿಕ್ಷಕ: ಮಕ್ಕಳೇ ನಿಮ್ಮ ಮನೆಯಲ್ಲಿ ಅತಿ ಸಣ್ಣವರು ಯಾರು?
ಮಕ್ಕಳು: ತಂದೆ ಸರ್.
ಶಿಕ್ಷಕ: ಅದು ಹೇಗೆ?
ಮಕ್ಕಳು: ಅವರಿನ್ನೂ ಭಯದಿಂದ ಅಮ್ಮನ ಸಂಗಡವೇ ಮಲಗುತ್ತಾರೆ!

★★★

ಅಪ್ಪ: ಅಮ್ಮ ಏಕೆ ಸುಮ್ಮನೆ ಕುಳಿತಿದ್ದಾಳೊ ಕಂದ?
ಮಗ: ಅಮ್ಮ ಲಿಪ್‌ಸ್ಟಿಕ್ ಕೇಳಿದ್ಳು. ನಾನು ಅವಳಿಗೆ ಫೆವಿಸ್ಟಿಕ್ ತಂದುಕೊಟ್ಟೆ. ಅದನ್ನ ಹಚ್ಕೊಂಡ ಬಳಿಕ ಸುಮ್ಮನೆ ಕುಳಿತಿದ್ದಾರೆ ಅಪ್ಪ!

★★★

ಜಗತ್ತು ವಿಚಿತ್ರವಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡಿ.
ಮನೆಯಲ್ಲಿ ಹೋಟೆಲ್ ಊಟ ಮತ್ತು ಹೋಟೆಲ್‌ನಲ್ಲಿ ಮನೆ ಊಟವನ್ನು ಮನುಷ್ಯ ನಿರೀಕ್ಷಿಸುತ್ತಾನೆ. ಅದರಲ್ಲೂ ಸತ್ತ ಮೀನೂ ಸಹ ಫ್ರೆಶ್ ಆಗಿಯೇ ಇರಬೇಕು ಎನ್ನುತ್ತಾನೆ.

★★★

ಆಸ್ಪತ್ರೆಯ ಮಂಚದಲ್ಲಿ ತನ್ನ ಕೊನೆ ದಿನ ನಿರೀಕ್ಷಿಸುತ್ತಿದ್ದ ವೃದ್ಧನೊಬ್ಬ ತನ್ನ ಹಿರಿಯ ಮಗನಿಗೆ ಜಯನಗರದ ಸ್ವಿಮ್ಮಿಂಗ್ ಬಡಾವಣೆಯಲ್ಲಿ ಮೂರು ಮನೆ, ಎರಡನೇ ಮಗನಿಗೆ ವಿಮಾ ಕಾಲೊನಿಯಲ್ಲಿ ನಾಲ್ಕು ಮನೆ ಮತ್ತು ಹೆಂಡತಿಗೆ ಕುಮಾರ ಬಡಾವಣೆಯಲ್ಲಿ ಮೂರು ಮನೆ ಬರೆದುಕೊಟ್ಟ. ಅಲ್ಲಿಯೇ ನಿಂತಿದ್ದ ನರ್ಸ್ ಅದನ್ನೆಲ್ಲ ಗಮನಿಸಿ ಹೌಹಾರಿದಳು. ಅದನ್ನು ನೋಡಿದ ಹೆಂಡತಿ ಸುಮ್ಮನಿರಮ್ಮ ಅವೆಲ್ಲಾ ಅವರು ಮುಂಜಾನೆ ಹಾಲು ಮತ್ತು ಪೇಪರ್ ಹಾಕುವ ಮನೆಗಳು ಎಂದಳು. ಅದನ್ನು ಕೇಳಿ ನರ್ಸ್ ಸಾವರಿಸಿಕೊಂಡಳು.

★★★

ಮಹಿಳೆಯರ ಸಮಸ್ಯೆ ಏನು?
ಸೊಸೆಯಾದಾಗ ಅತ್ತೆ ಸರಿಯಾಗಿರುವುದಿಲ್ಲ
ಅತ್ತೆಯಾದಾಗ ಸೊಸೆ ಸರಿ ಇರುವುದಿಲ್ಲ.
ಹಿರಿಯ ಸೊಸೆಯಾದಾಗ ಕಿರಿ ಸೊಸೆ ಸರಿ ಇರುವುದಿಲ್ಲ.
ಅತ್ತಿಗೆಯಾದಾಗ ನಾದಿನಿ ಸರಿ ಇರಲ್ಲ
ಎಲ್ಲರೂ ಸರಿಯಾಗಿದ್ದರೆ
ಸರಿಯಾದ ಕೆಲಸದಾಕೆ ಸಿಕ್ಕಲ್ಲ
ಕೊನೆಗೆ ಉಳಿದಿರೋದು ಬಡಪಾಯಿ ಗಂಡ ಮಾತ್ರ.
ಅವನೂ ಸಹ ಇವತ್ತಿನವರೆಗೂ ಯಾರಿಗೂ ಸರಿಯಾಗಿ ಸಿಕ್ಕಿಲ್ಲವಂತೆ!

(ಸಂಗ್ರಹ) ರಮಾನಂದ ಶರ್ಮಾ, ಬೆಂಗಳೂರು

ಪತ್ನಿ: ದೋಸೆ ಮಿಕ್ಸ್ ತರಲು ಹೋಗಿದ್ದ ನನ್ನ ಗಂಡ ಕಳೆದ ಮೂರು ದಿನದಿಂದ ನಾಪತ್ತೆಯಾಗಿದ್ದಾರೆ.
ಪೊಲೀಸ್: ಮೂರು ದಿನದಿಂದ ಏನು ಮಾಡುತ್ತಿದ್ದೀರಿ?
ಪತ್ನಿ: ನಾನು ಉಪ್ಪಿಟ್ಟು ಮತ್ತು ಪೂರಿ ಮಾಡಿ ಮ್ಯಾನೇಜ್ ಮಾಡ್ಕೊಂಡೆ.

★★★

ಜಡ್ಜ್: ನೀನು ಹೆಂಡತಿಯನ್ನು ಮಾರಿದ್ದೇಕೆ..?
ತಿಮ್ಮ: ಸ್ವಾಮಿ ಅವಳೇ ಹೇಳಿದ್ಲು ನಾನು ಒಲಿದರೆ ನಾರಿ ಮುನಿದರೆ ಮಾರಿ.. ಮೊನ್ನೆ ಮುನಿದ್ಲು....ಅದಕ್ಕೇ. ...!

★★★

ಗುಂಡ: ಡಾಕ್ಟರೇ ನನ್ನ ಹೆಂಡತಿ ತುಂಬಾ ಸಿಡಿಮಿಡಿ, ನೆಮ್ಮದಿ ಇಲ್ಲ.
ಆಕೆಯ ಸ್ವಭಾವ ಬದಲಾಗಲು ಏನಾದರೂ ಔಷಧಿ ಇದೆಯೇ?
ಡಾಕ್ಟರ್: ಅದು ಇದ್ದರೆ ನಾನ್ಯಾಕೆ ಭಾನುವಾರವೂ ಇಲ್ಲಿ ಇರುತ್ತಿದ್ದೆ?

★★★

ಮಹಿಳೆ: ರೀ ಮೂರು ದಿನದಿಂದ ಇಂಟರ್‌ನೆಟ್ ವರ್ಕ್ ಆಗ್ತಾ ಇಲ್ಲ, ನಾನೀಗ ಏನು ಮಾಡ್ಲಿ?
ಗಂಡ: ಅದ್ ಸರಿಯಾಗುವವರೆಗೆ ಆದರೂ ಮನೆಗೆಲಸ ನೀನೇ ಮಾಡೇ...

ॐ ✝ ☪ ಸರ್ವೇಜನಃ ಸುಖಿನೋ ಭವಂತು ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.